**ಇಂದು ದಿನಾಂಕ 02.02.2026 ರಂದು ಡಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

**1.** ನಾನು ಬಿ.ಕಾಂ. ಓದಿದ್ದೇನೆ. ನನ್ನ ತಂದೆ ಚಂದ್ರಶೇಖರ್ ರವರು 7 ನೇ ತರಗತಿ ಓದಿದ್ದಾರೆ. ನನ್ನ ತಂದೆ ಇದ್ದಾಗ ನಾನು ಜೊತೆಯಲ್ಲಿ ನಮ್ಮ ಮನೆಯ ಯಜಮಾನಿಕೆಯನ್ನು ಮಾಡುತ್ತಿದ್ದೆನು. ಮದ್ದೂರಪ್ಪನ ಮಗ ಕೈಯಪ್ಪ ಮತ್ತು ಈ ದಾವೆಯ ಪಕ್ಷಗಾರರು ನನಗೆ ಗೊತ್ತಿದೆ ಎಂದರೆ ನಿಜ. ದಾವಾ ಆಸ್ತಿಯ ಬಗ್ಗೆ ನನಗೆ ಗೊತ್ತು. ದಾವಾ ಆಸ್ತಿ ಮೂಲತಃ ಕೈಯಪ್ಪನಿಗೆ ಸೇರಿದ್ದು ಅವರಿಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ನಿಜ. ಗ್ರ್ಯಾಂಟ್ ಸರ್ಟಿಫಿಕೇಟ್ ಅವರ ಹೆಸರಿಗೆ ನೀಡುವಾಗ ಅವರ ಹೆಬ್ಬೆಟ್ಟನ್ನು ನಮೂದಿಸಿ ನೀಡುತ್ತಾರೆ ಎಂದರೆ ನಿಜ. ಕೈಯಪ್ಪನವರು ಸಹಿ ಮಾಡುತ್ತಿರಲಿಲ್ಲ ಆದ ಕಾರಣ ಅವರ ಹೆಬ್ಬೆಟ್ಟನ್ನು ಪಡೆದು ದಾಖಲೆ ನೀಡಿದ್ದಾರೆ ಎಂದರೆ ನಿಜ. ಸರ್ಕಾರದಿಂದ ಗ್ರ್ಯಾಂಟ್ ಆದ ನಂತರ ಖಾತೆ ಕಂದಾಯ ಅವರ ಹೆಸರಿಗೆ ಮಾಡಿಸಿಕೊಂಡು ಸ್ವಾಧೀನದಲ್ಲಿದ್ದರು ಎಂದರೆ ನಿಜ. ಕೈಯಪ್ಪ ಮತ್ತು ವಾದಿಗಳು ಶಿಡ್ಲಘಟ್ಟ ಕುಮಿಗಾನಹಳ್ಳಿ ಗ್ರಾಮದಲ್ಲಿ ಇದ್ದರು ಎಂದರೆ ನಿಜ. ಅವರು ಸಾತನೂರಿಗೆ ಬಂದು ಜೀವನೋಪಾಯಕ್ಕಾಗಿ ಜಮೀನನ್ನು ಗ್ರ್ಯಾಂಟ್ ಮಾಡಿಸಿಕೊಂಡಿದ್ದಾರೆ ಎಂದರೆ ನಿಜ. ಅವರು ಮೂಲತಃ ಪರಿಶಿಷ್ಟ ಜಾತಿಗೆ ಸೇರಿದವರು ಎಂದರೆ ನಿಜ. ತಪ್ಪು ಅಪವಾದ ಮಾಡಿ ವಾದಿಯರು ದಾವೆ ಹಾಕಿದ್ದಾರೆ. ವಾದಿಗಳು ಕ್ರಯಪತ್ರವನ್ನು ಮಾಡಿಕೊಟ್ಟಿರುವುದು ತಪ್ಪು ಎಂದು ದಾವೆ ಹಾಕಿದ್ದಾರೆ. ತಕರಾರು ಹಾಕುವ ಮೊದಲು ದಾವೆಯಲ್ಲಿ ಏನು ವಿಚಾರ ಇದೆ ಎಂದು ತಿಳಿದುಕೊಂಡಿದ್ದೇನೆ. ದಿನಾಂಕಃ 22.07.2002 ರಲ್ಲಿ ಕೈಯಪ್ಪನವರು ಕುಮಿಗಾನಹಳ್ಳಿ ಮನೆಯಲ್ಲಿ ಮೃತರಾಗಿದ್ದರು ಎಂದರೆ ಸರಿಯಲ್ಲ. ಅವರು ಸಾತನೂರಿನಲ್ಲಿದ್ದಾಗ ಮೃತರಾದರು. ಮುಂದುವರೆ ಸಕ್ಷಿಯು ಅವರು ನೋಂದಣಿಯಾಗುವ ಸಮಯದಲ್ಲಿ ಸಾತನೂರಿನಲ್ಲಿ ಉಳಿದುಕೊಂಡಿದ್ದರು ಅವರು ಎಲ್ಲಿ ಮೃತರಾದರು ಎಂದು ಗೊತ್ತಿಲ್ಲ. ದಿನಾಂಕಃ28.04.2003 ರಂದು ದಾವಾ ಆಸ್ತಿಗೆ ಕೈಯಪ್ಪ ಮತ್ತು ಕೈಯಪ್ಪನವರ ಕುಟುಂಬದವರು ಕ್ರಯಪತ್ರವನ್ನು ಮಾಡಿಕೊಟ್ಟಿದ್ದಾರೆ ಮತ್ತು ಅದಕ್ಕೂ ಮುನ್ನ ಒಂದು ಕರಾರು ಪತ್ರವನ್ನು ಮಾಡಿಕೊಟ್ಟಿದ್ದರು ಎಂದು ತಕರಾರಿನಲ್ಲಿ ಹೇಳಿದ್ದೇವೆ. ನನ್ನ ತಂದೆಗೆ 2002 ರಲ್ಲಿ ಕರಾರು ಪತ್ರವಾಗಿದೆ. ನವೆಂಬರ್ ತಿಂಗಳಲ್ಲಿ ನಿಖರ ದಿನಾಂಕ ಗೊತ್ತಿಲ್ಲ. ಕರಾರು ಪತ್ರದಲ್ಲಿ ಕೈಯಪ್ಪನವರ ವಿಳಾಸ ಯಾವುದು ಎಂದು ಗೊತ್ತಿಲ್ಲ. ಕ್ರಯಪತ್ರದಲ್ಲಿರುವ ವಿಳಾಸ ಗೊತ್ತು. ಕರಾರು ಪತ್ರದ Terms and Conditions ನನಗೆ ಗೊತ್ತಿಲ್ಲ. ಮಾಹಿತಿ ಇದ್ದು ನಾನು ದಾಖಲೆಗಳನ್ನು

ಹಾಜರು ಮಾಡಿದ್ದೇನೆ. ಕರಾರು ಪತ್ರದ ಷರತ್ತುಗಳಂತೆ ಕ್ರಯಪತ್ರವನ್ನು ಮಾಡಿಕೊಂಡಿದ್ದೇವೆ ಎಂದು ಕ್ರಯಪತ್ರದಲ್ಲಿ ಅದರ ಬಗ್ಗೆ ಉಲ್ಲೇಖ ಇಲ್ಲ. ನಾನು ತಕರಾರು ಹಾಕಿದ ನಂತರ ಕರಾರು ಪತ್ರ ಇದೆ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಮಾರಾಟದ ಅನುಮತಿಯಲ್ಲಿ ಯಾರಿಗೆ ಮಾರಾಟ ಮಾಡುತ್ತಿದ್ದೇವೆ ಎಂದು ಮತ್ತು ಯಾರ ಹೆಸರಿಗೆ ಮಾರಾಟ ಮಾಡುತ್ತಿದ್ದೇವೆ ಎಂದು ನಮೂದಿಲ್ಲ ಎಂದರೆ ನಿಜ. ಗ್ರ್ಯಾಂಟ್‌ದಾರರು ಎಲ್ಲಾ ದಾಖಲೆಗಳನ್ನು ಕೊಟ್ಟು ಸಹಿ ಹಾಕಿ ಮಾರಾಟ ಮಾಡಲು ಅನುಮತಿ ಕೇಳಬೇಕು ಎಂದರೆ ನಿಜ. ಕೈಯಪ್ಪನವರು ಖುದ್ದಾಗಿ ಸರ್ಕಾರಕ್ಕೆ ಮಾರಾಟ ಮಾಡಲು ಅನುಮತಿ ಕೊಡಿ ಎಂದು ಸಹಿ ಹಾಕಿ ಅರ್ಜಿ ಹಾಕಿದ ದಾಖಲೆಯನ್ನು ಹಾಜರು ಪಡಿಸಿದ್ದೀರ ಎಂದರೆ ಮಾಡಿದ್ದೇನೆ ಎನ್ನುತ್ತಾರೆ. ಅದು ನಿಡಿ-2 ಮತ್ತು 4 ರಂತಿದೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**